R.A.No.59/2011
R.W.1.

**ಸಾಕ್ಷಿಯನ್ನು ದಿಃ 25.02.2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು**

**ಪಾಟೀ ಸವಾಲುಃ ಮೇಲ್ಮನವಿದಾರರ ಪರ ಶ್ರೀ ಜಿ ಕೆ ಎಂ ವಕೀಲರಿಂದ**

ನಾನು ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಈ ನ್ಯಾಯಾಲಯದಲ್ಲಿ ಮೂಲ ವಿಲ್ ಹಾಜರುಪಡಿಸಿಲ್ಲ. ಮೂಲ ವಿಲ್ ಮುಧೋಳ ಸಿವಿಲ್ ಜಡ್ಜ ನ್ಯಾಯಾಲಯದಲ್ಲಿ ಅಸಲು ದಾವೆ 147/2010 ರಲ್ಲಿ ಸಲ್ಲಿಸಿದ್ದೇನೆ. ಸದರಿ ನ್ಯಾಯಾಲಯದಲ್ಲಿ ಮೂಲವಿಲ್ ನ್ನು ನಾನೇ ಸಲ್ಲಿಸಿರುತ್ತೇನೆ. ಅದರಲ್ಲಿ ಸಾಕ್ಷಿಯನ್ನು ಸಹ ನಾನೇ ಹೇಳಿದ್ದೇನೆ. ನಾನು ಸದರಿ ಮುಧೋಳ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಲ್ಲ, ನಾನೇ ಹೇಳಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಮುಧೋಳ ನ್ಯಾಯಾಲಯದಲ್ಲಿ ನಮ್ಮ ತಂದೆ ಸಾಕ್ಷಿ ಹೇಳಿದ್ದಾರೆ ಅಂದರೆ ಸರಿ. ಮುಧೋಳ ನ್ಯಾಯಾಲಯದಲ್ಲಿ ಮೃತ್ಯುಪತ್ರವನ್ನು ನಮ್ಮ ತಂದೆ ಹಾಜರುಪಡಿಸಿದ್ದಾರೆ ಅಂದರೆ ಸರಿಯಲ್ಲ, ನಮ್ಮ ಅಜ್ಜಿ ಹಾಜರುಪಡಿಸಿದ್ದಾರೆ. ಅಜ್ಜಿ ಅಂದರೆ ಭಾಗೀರಥಿ- ನಮ್ಮ ತಂದೆಯ ತಮ್ಮನ ಹೆಂಡತಿ. ಮೃತ್ಯುಪತ್ರ ಮುಧೋಳ ನ್ಯಾಯಾಲಯಲ್ಲಿಯೇ ಇದೆ. ಆ ಮೃತ್ಯುಪತ್ರವನ್ನು ಈ ನ್ಯಾಯಾಲಯಕ್ಕೆ ತರಿಸಲು ಸಾಧ್ಯವಾಗುತ್ತದೆ. ಮೂಲವಿಲ್ ನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಲು ನಾನು ಈ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದೇನೋ ಇಲ್ಲೋ ನನಗೆ ಮಾಹಿತಿ ಇಲ್ಲ.

2. ನಮ್ಮ ತಂದೆಯವರು ಸಹ ಪ್ರಸ್ತುತ ಮೇಲ್ಮನವಿಯಲ್ಲಿ ವಾರಸುದಾರರನ್ನು ರಿಕಾರ್ಡ ಮೇಲೆ ತರಲು ಅರ್ಜಿ ಸಲ್ಲಿಸಿದಾಗ, ವಿಲ್ ನ್ನು ಹಾಜರುಪಡಿಸಿಲ್ಲ ಅಂದರೆ ನನಗೆ ಮಾಹಿತಿ ಇಲ್ಲ. ನಾನು ಹಾಜರುಪಡಿಸಿರುವ ದೃಢೀಕೃತ ವಿಲ್ ನ ಮೂಲಪ್ರತಿಯು ಸೃಷ್ಟಿಸಿದ ದಾಖಲೆ ಆಗಿರುವುದರಿಂದ ನಮ್ಮ ತಂದೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ಈಗಲೂ ಸಹ ಆ ಮೃತ್ಯುಪತ್ರವನ್ನು ತಂದು ಹಾಜರುಪಡಿಸಿದರೆ, ಸೃಷ್ಟಿಮಾಡಿದ ಮೃತ್ಯುಪತ್ರ ಎಂದು ಗೊತ್ತಾಗುತ್ತದೆ ಎನ್ನುವ ಕಾರಣಕ್ಕೆ, ನಾನು ಅದನ್ನು ಈ ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ ಅಂದರೆ ಸರಿ. ನಾನು ಮೂಲಮೃತ್ಯುಪತ್ರವನ್ನು

R.A.No.59/2011
R.W.1.

ಹಾಜರುಪಡಿಸದೇ ಇಲ್ಲದ ಕಾರಣ, ನಾನು ಮೃತ್ಯುಪತ್ರದ ಆಧಾರದ ಮೇಲೆ ಈ ಪ್ರಕರಣದಲ್ಲಿ ಸೇರ್ಪಡೆಗೊಳ್ಳಲು ಅರ್ಹನಲ್ಲ ಮತ್ತು ನಾನು ಸಲ್ಲಿಸಿರುವ ಅರ್ಜಿ ಪೋಷಣಾಯೋಗ್ಯವಲ್ಲ ಅಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸರಿ ಇದೆ

MAHAMED IMTHIYAZ AHAMED
Digitally signed by MAHAMED IMTHIYAZ AHAMED
Date: 2026.02.27 11:22:23 +0530

1 ನೇ ಹೆಚ್ಚುವರಿ ಜಿಲ್ಲಾ ವ ಸತ್ರ ನ್ಯಾಯಾಧೀಶರು
ಬಾಗಲಕೋಟ, ಉಪಸ್ಥಿತಿ ಜಮಖಂಡಿ